**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೊಂಭತ್ತನೆಯ ಅಧಿವೇಶನ**

# ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–18)**
**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 284ರ ಪ್ರತಿಯೋಜನೆ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ 284ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"284. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅಧಿಕಾರ.-** (1) ಚರಂಡಿ ಸೇರಿದಂತೆ ಯಾವುದೇ ಖಾಸಗಿ ಬೀದಿಯು ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವಾಗುವಂಥ ಸ್ಥಿತಿಯಲ್ಲಿದ್ದರೆ ಕಮೀಷನರ್ ಆ ಖಾಸಗಿ ಬೀದಿಗೆ ಸಂಬಂಧಿಸಿದಂತೆ ತಾನೇ ಸ್ವತಃ ಅಥವಾ ಸದರಿ ಖಾಸಗಿ ಬೀದಿಯ ಮಾಲೀಕರ ಅಥವಾ ಅಂಥ ಬೀದಿಯ ಮುಂಭಾಗದಲ್ಲಿರುವ ಅಥವಾ ಹೊಂದಿಕೊಂಡಿರುವ ಕಟ್ಟಡದ ಅಥವಾ ಭೂಮಿಗಳ ಮಾಲೀಕರ ಕೋರಿಕೆಯ ಮೇರೆಗೆ ಸಾರ್ವಜನಿಕ ನೋಟೀಸು ಮತ್ತು ಅಂಥ ಮಾಲೀಕರಿಗೆ ನೋಟಿಸ್ ನೀಡುವ ಮೂಲಕ ಸದರಿ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅದರ ಉದ್ದೇಶವನ್ನು ತಿಳಿಸತಕ್ಕದ್ದು. ಆನಂತರ, ಅಂಥ ಮಾಲೀಕರು ಅಥವಾ ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯು ಸದರಿ ಉದ್ದೇಶದ ವಿರುದ್ಧ ಯಾವುದೇ ಆಕ್ಷೇಪಣೆಗಳೇನಾದರು ಇದ್ದರೆ ಅಂಥ ಸಾರ್ವಜನಿಕ ನೋಟಿಸ್ ಜಾರಿ ಮಾಡಿದ ದಿನಾಂಕದಿಂದ ಒಂದು ತಿಂಗಳ

ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಕಮೀಷನರ್ ಆಕ್ಷೇಪಣೆಗಳೇನಾದರು ಇದ್ದರೆ, ಅವುಗಳನ್ನು ಪರಿಶೀಲಿಸಿದ ತರುವಾಯ ಅಂಥ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸಬಹುದು:

ಪರಂತು, ಖಾಸಗಿ ಬೀದಿಯು ಒಂದಕ್ಕಿಂತ ಹೆಚ್ಚಿನ ನಗರಪಾಲಿಕೆಗಳಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಕಮೀಷನರ್‌ಗಳು ನೋಟಿಸ್ ನೀಡತಕ್ಕದ್ದು ಮತ್ತು ಆನಂತರ ತನ್ನ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಆ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸತಕ್ಕದ್ದು:

ಮತ್ತು ಪರಂತು, ಸಾರ್ವಜನಿಕ ಬೀದಿಯೆಂದು ಘೋಷಿಸುವ ಖಾಸಗಿ ಬೀದಿಯು ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಬೀದಿಯಿಂದ ಸಂಪರ್ಕ ಹೊಂದಿರತಕ್ಕದ್ದು.

(2) ಬೀದಿ ಅಥವಾ ಅಂಥ ಬೀದಿಯ ಭಾಗವನ್ನು ಹಿಂದಿನ ಭೂ ಮಾಲೀಕನು ವರ್ಗಾವಣೆ ಅಥವಾ ಹಸ್ತಾಂತರಣದ ನೋಂದಾಯಿತ ಕ್ರಯಪತ್ರದಲ್ಲಿ ರಸ್ತೆಯನ್ನಾಗಿ ತೋರಿಸಿದ್ದಲ್ಲಿ ಮತ್ತು ಅದನ್ನಾಧರಿಸಿ ಕಟ್ಟಡದ ನಿವೇಶನಕ್ಕೆ ಹೊಂದಿಕೊಂಡಿರುವಂತೆ ಭೂ ಮಾಲೀಕನು ಹೊಂದಿಕೊಂಡಿರುವ ಕಟ್ಟಡ ನಿವೇಶನಗಳನ್ನು ಮಾರಾಟ ಅಥವಾ ವರ್ಗಾವಣೆ ಮಾಡುವ ಮೂಲಕ ಅಂಥ ರಸ್ತೆ ಅಥವಾ ಬೀದಿಯ ಪ್ರಯೋಜನವನ್ನು ಪಡೆದುಕೊಂಡಿರುವಲ್ಲಿ ಮತ್ತು (1)ನೇ ಉಪ ಪ್ರಕರಣದ ಮೇರೆಗೆ ಅಂಥ ರಸ್ತೆಯನ್ನು ಸಾರ್ವಜನಿಕ ಬೀದಿಯಾಗಿ ಘೋಷಿಸಿರುವಲ್ಲಿ, ಭೂ ಮಾಲೀಕನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದ ಮೇರೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಸೇರಿದಂತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ, 2013(2013ರ ಕೇಂದ್ರ ಅಧಿನಿಯಮ 30) ಅಥವಾ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗತಕ್ಕದ್ದಲ್ಲ.

**ವಿವರಣೆ I:** "ಹಿಂದಿನ ಭೂ ಮಾಲೀಕರು" ಎಂದರೆ, ನಿವೇಶನಗಳನ್ನು ಮಾರಾಟ ಮಾಡುವ ಸಮಯದಲ್ಲಿ ಯಾವ ವ್ಯಕ್ತಿಯ ಹೆಸರಿನಲ್ಲಿ ಕೃಷಿ ಅಥವಾ ಪರಿವರ್ತಿತ ಭೂಮಿ ಇತ್ತೋ ಆ ವ್ಯಕ್ತಿ ಮತ್ತು ಆತನ ಮೇರೆಗೆ ಅಥವಾ ಮೂಲಕ ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

**ವಿವರಣೆ II:** "ಸಾರ್ವಜನಿಕ ಬೀದಿ" ಎಂದರೆ, ನಗರ ಪಾಲಿಕೆ ಅಥವಾ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಗಳು ನಿರ್ವಹಿಸುವ ದಾರಿಯ ಹಕ್ಕನ್ನು ಹೊಂದಿರುವ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಓಣಿ, ಹಾದಿ ಅಥವಾ ಅದು ಹೆದ್ದಾರಿಯಾಗಿರಲಿ ಅಥವಾ ಇಲ್ಲದಿರಲಿ ಸವಾರಿ ಮಾರ್ಗ ಮತ್ತು ಈ ಮುಂದಿನವುಗಳನ್ನು ಒಳಗೊಂಡಿದೆ:-

(ಎ) ಯಾವುದೇ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮೇಲಿನ ರಸ್ತೆ;

(ಬಿ) ಯಾವುದೇ ಅಂಥ ಬೀದಿ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿಗೆ ಜೋಡಿಸಲಾದ ಪಾದಚಾರಿ ಮಾರ್ಗ; ಮತ್ತು

(ಸಿ) ಅಂಥ ಯಾವುದೇ ರಸ್ತೆ, ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮತ್ತು ಭೂಮಿಗೆ ಹೊಂದಿಕೊಂಡಿರುವ ಚರಂಡಿಗಳು, ಅಕ್ಕಪಕ್ಕದ ಸ್ವತ್ತುಗಳ ಗಡಿಗಳವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ ಯಾವುದೇ ಪಾದಚಾರಿ ವರಾಂಡಾ ಅಥವಾ ಇತರ ನಿರ್ಮಾಣಗಳಿಂದ ಆವೃತವಾಗಿರಲೀ ಅಥವಾ ಇಲ್ಲದಿರಲೀ, ಆ ಸ್ವತ್ತು ಖಾಸಗಿಯೇ ಅಥವಾ ಸರ್ಕಾರದ ಸ್ವತ್ತಾಗಿರಲಿ ಅಥವಾ ಅದು ನಗರ ಪಾಲಿಕೆಗೆ ಸೇರಿದ್ದಾಗಿರಲಿ.”

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಈ ಮುಂದಿನವುಗಳಿಗಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಖಾಸಗಿ ಬೀದಿಗಳು ಮತ್ತು ಚರಂಡಿಗಳು ಕಳಪೆ ಸ್ಥಿತಿಯಲ್ಲಿದ್ದರೆ ಮತ್ತು ಸಾರ್ವಜನಿಕ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವನ್ನುಂಟುಮಾಡಿದರೆ ಅವುಗಳನ್ನು ಪೂರ್ವಭಾವಿಯಾಗಿ ಮಧ್ಯಪ್ರವೇಶಿಸಲು ಮತ್ತು ಸ್ವಾಧೀನಪಡಿಸಿಕೊಳ್ಳಲು ಕಮೀಷನರ್ ಅಥವಾ ಚೀಫ್ ಆಫೀಸರ್‌ಗೆ ಅಧಿಕಾರ ನೀಡುವುದು; ಮತ್ತು

(ii) ಪ್ರಾಧಿಕಾರದ ಸ್ವಂತ ಇಚ್ಛೆಯ ಮೇರೆಗೆ ಅಥವಾ ಖಾಸಗಿ ಬೀದಿ ಅಥವಾ ಪಕ್ಕದ ಸ್ವತ್ತುಗಳ ಮಾಲೀಕರ ಕೋರಿಕೆಯ ಮೇರೆಗೆ ಘೋಷಣೆಯ ಪ್ರಕ್ರಿಯೆ ಪ್ರಾರಂಭಿಸುವುದನ್ನು ಅನುಮತಿಸುವುದು;

(iii) ಹಿಂದಿನ ಭೂ ಮಾಲೀಕರ ಬೀದಿ ಭೂಮಿಗೆ ಪರಿಹಾರ ಅಥವಾ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಪಡೆಯುವುದನ್ನು ತಡೆಯುವುದು.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ. ಯತೀಂದ್ರ ಸಿದ್ದರಾಮಯ್ಯ**
ನಗರಾಭಿವೃದ್ಧಿ ಮಂತ್ರಿ

**ಜ್ಯೋತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976**

**(1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ**

**ಉದ್ಧೃತ ಭಾಗ**

**XXX XXX XXX**

**284. ಬೀದಿಗಳನ್ನು ಸಾರ್ವಜನಿಕ ಬೀದಿಗಳೆಂದು ಘೋಷಿಸುವಂತೆ ಅಗತ್ಯ ಪಡಿಸಲು ಮಾಲೀಕರ ಹಕ್ಕು.-** 283ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಬೀದಿಯನ್ನು ಮಟ್ಟ ಮಾಡಿದ್ದರೆ, ಅದಕ್ಕೆ ನೆಲಗಟ್ಟು ಮಾಡಿದ್ದರೆ, ಜಲ್ಲಿ ಹಾಕಿದ್ದರೆ, ಚಪ್ಪಡಿ ಹಾಸಿದ್ದರೆ, ಕಾಲುವೆ ಮಾಡಿದ್ದರೆ, ಒಳಚರಂಡಿಯನ್ನು ಮಾಡಿದ್ದರೆ, ಚರಂಡಿಯನ್ನು ಮಾಡಿದ್ದರೆ, ನಿರ್ಮಲೀಕರಿಸಿದ್ದರೆ ಮತ್ತು ದೀಪದ ವ್ಯವಸ್ಥೆ ಮಾಡಿದ್ದರೆ, ಅಂಥ ಬೀದಿಯನ್ನು ಆ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ತಿಳಿಸಿದ ಮಾಲೀಕರಲ್ಲಿ ಹೆಚ್ಚು ಮಂದಿಯ ಕೋರಿಕೆಯ ಮೇಲೆ ಸಾರ್ವಜನಿಕ ಬೀದಿ ಎಂದು ಘೋಷಿಸತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 350, 21ನೇ ಆಗಸ್ಟ್ 2026